**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ದೇವದುರ್ಗ.**

**ಸಿ.ಸಿ ನಂಬರ್ಃ 405/2024**

**ಪಿರ್ಯಾದಿ** ಃ **ಸರ್ಕಾರದ ಪರವಾಗಿ** ದೇವದುರ್ಗ **ಪೊಲೀಸರು,**
**ದೇವದುರ್ಗ ತಾಲ್ಲೂಕು.**

**ವಿರುದ್ದ**

**ಆರೋಪಿತ ನಂ. 1** ಃ ಅಮರೇಶ ನಾಯಕ ತಂದೆ ದುರುಗಯ್ಯ, 36 ವರ್ಷ,
ಉಃ ಕಂಟ್ರಕ್ಟರ್, ವಾಸಃ ಅಂಜಳ ಗ್ರಾಮ,
ತಾ ದೇವದುರ್ಗ, ಜಿಃ ರಾಯಚೂರು.

## ದೋಷಾರೋಪಣೆ

**ಶ್ರೀ ರಫೀಕ್ ಅಹ್ಮದ್ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ, ದೇವದುರ್ಗ, ಆದ ನಾನು ಈ ಕೆಳಗಿನ ದೋಷಾರೋಪಣೆಯನ್ನು ನಿಮ್ಮ ಮೇಲೆ ಹೊರಿಸುವುದೇನಂದರೆ,**

ಆರೋಪಿ ನಂಬರ್ 1 ನೇದ್ದವನು ಕೃಷ್ಣಾ ನದಿಯಿಂದ ಅಕ್ರಮವಾಗಿ ಮರಳನ್ನು ಸಾಗಾಟ ಮಾಡಿ ಆರೋಪಿ ನಂ.02 ನೇದ್ದವರ ಮಾಲೀಕತ್ವದ ಗೋಪಾಳಪೂರ ಸೀಮಾಂತರದ ಜಮೀನು ಸರ್ವೆ ನಂಬರ್ 35/2/2 ನೇದ್ದರಲ್ಲಿ ಅಕ್ರಮವಾಗಿ ಮರಳನ್ನು ದಾಸ್ತಾನು ಮಾಡಿದ್ದು, ಸಾಕ್ಷಿ ನಂಬರ 1 ನೇದ್ದವರು ಪಂಚರಾದ ಸಾಕ್ಷಿ ನಂಬರ 02 ಮತ್ತು 03 ನೇದವರಿಗೆ ಸದರಿ ವಿಷಯ ತಿಳಿಸಿ ದಿನಾಂಕ: 15/05/2024 ರಂದು ಮದ್ಯಾಹ್ಞ 3-00 ಗಂಟೆಗೆ ಸಾಕ್ಷಿ ನಂಬರ 1 ರಿಂದ ಸಾಕ್ಷಿ ನಂಬರ 5 ರವರೆಗೆ ಎಲ್ಲರೂ ಸೇರಿಕೊಂಡು ಗೋಪಾಳಪೂರ ಸೀಮಾಂತರದ ಜಮೀನು ಸರ್ವೆ ನಂಬರ್ 35/2/2 ದಲ್ಲಿ ದಾಳಿ ಮಾಡಿ, ಮುದ್ದೆ ಮಾಲನ್ನು ಜಪ್ತಿ ಮಾಡಿಕೊಂಡಿದ್ದು ಇರುತ್ತದೆ. ಕೃಷ್ಣಾ ನದಿಯಿಂದ ಅಕ್ರಮವಾಗಿ ಮರಳನ್ನು ಕಳ್ಳತನದಿಂದ ಸಾಗಾಟ ಮಾಡಿ ಆರೋಪಿ ನಂಬರ್ 1 ನೇದ್ದವನು ಆರೋಪಿ ನಂ 02 ನೇದ್ದವನ ಸರ್ವೆ ನಂ 35/2/2 ರಲ್ಲಿ ದಾಸ್ತಾನು ಮಾಡಿದ್ದು. **ಆ ಮೂಲಕ ಆರೋಪಿತನಾದ ನಿನ್ನ ಮೇಲೆ ಭಾ ದಂ ಸಂ ಕಲಂ 379 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿದ್ದು ಈ ನ್ಯಾಯಾಲಯದ ಸಂಜ್ಞೇಯತೆಯಲ್ಲಿ ಇರುತ್ತದೆ.**

**ಮೇಲ್ಕಂಡ ಎಲ್ಲಾ ಆರೋಪಗಳು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಬರುತ್ತವೆ.**

**ಪ್ರಶ್ನೆ ಃ ಮೇಲ್ಕಂಡ ಆಪಾದನೆಯನ್ನು ಅರ್ಥ ಮಾಡಿಕೊಂಡಿರಾ?**
**ಉತ್ತರ ಃ**
**ಪ್ರಶ್ನೆ ಃ ಮೇಲ್ಕಂಡ ಆಪಾದನೆಯನ್ನು ಒಪ್ಪಿಕೊಳ್ಳುವಿರಾ?**
**ಉತ್ತರ ಃ**
**ಪ್ರಶ್ನೆ ಃ ಮೇಲ್ಕಂಡ ಆಪಾದನೆಯ ವಿಚಾರಣೆ ಆಗಬೇಕೆ?**
**ಉತ್ತರ ಃ**

**(ಮೇಲ್ಕಂಡ ಆಪಾದನೆಯನ್ನು ಆರೋಪಿಗೆ ಕನ್ನಡದಲ್ಲಿ ಓದಿ ಹೇಳಿ ನಂತರ ಅವರು ನೀಡಿದ ಉತ್ತರವನ್ನು ಬರೆದುಕೊಂಡು ಸರಿಯಾಗಿದೆ ಎಂದು ದೃಢೀಕರಿಸಿದೆ)**

ದಿನಾಂಕ **21.06.2025**
ಸ್ಥಳ **ದೇವದುರ್ಗ**

**(ಶ್ರೀ ರಫೀಕ್ ಅಹ್ಮದ್)**
**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,**
**ದೇವದುರ್ಗ.**